ಪ್ರಕಟಣೆ

ಉಪಾಧ್ಯಕ್ಷರು.—ನಿನ್ನೆ ದಿನ ಸದನದ ಜಂಟಿ ಸಮಿತಿಯಲ್ಲಿ ಸೇವೆ ಸಲ್ಲಿಸುವ ಸದಸ್ಯರ ಹೆಸರುಗಳನ್ನು ಪ್ರಕಟಿಸುವ ಸಂದರ್ಭದಲ್ಲಿ ಬೆರಳಚ್ಚು ದೋಷದಿಂದಾಗಿ ಬಾಬಾಗೌಡ ಪಾಟೀಲರ ಹೆಸರಿಗೆ ಬದಲಾಗಿ ಬಾಬುರಾವ್ ಚವಾಣರ ಹೆಸರನ್ನು ಪ್ರಕಟಿಸಲಾಗಿತ್ತು. ಆದ್ದರಿಂದ ಬಾಬುರಾವ್ ಚವಾಣ್ ಎಂಬ ಹೆಸರಿಗೆ ಬದಲಾಗಿ ಬಾಬಾಗೌಡ ಪಾಟೀಲ್ ಎಂದು ಓದಿಕೊಳ್ಳುವುದು.

ಶ್ರೀ ವಾಟಾಳ್ ನಾಗರಾಜ್.—ಇದಕ್ಕಿಂತ ಹಸಿ ಸುಳ್ಳು ಬೇರೆ ಇಲ್ಲ. ನೀವು ಮಾಡಿರತಕ್ಕಂತಹ ತಪ್ಪನ್ನು ಸುಳ್ಳನ್ನು ಬೆರಳಚ್ಚುಗಾರರ ಮೇಲೆ ಹಾಕುವುದು ಸರಿಯಲ್ಲ.

ಉಪಾಧ್ಯಕ್ಷರು.—ಸಭೆಯು ಈಗ ಮೇಲೆದ್ದು ಮತ್ತೆ ೨–೩೦ಕ್ಕೆ ಪುನಃ ಸೇರುವುದು.

(ಸದನವು ೧–೦೮ಕ್ಕೆ ಮುಕ್ತಾಯವಾಗಿ ಮತ್ತೆ ೨–೩೦ಕ್ಕೆ ಸೇರುವುದೆಂದು ನಿಶ್ಚಯಿಸಿತು.)

೩–೨೦ ಪಿ.ಎಂ.

(ಸದನವು ೩.೨೩ಕ್ಕೆ ಪ್ರಾರಂಭವಾಯಿತು, ಮಾನ್ಯ ಉಪಾಧ್ಯಕ್ಷರು (ಶ್ರೀ ಅಂಜನಾಮೂರ್ತಿ)ರವರು ಸಭಾಧೀಶವನ್ನು ಅಲಂಕರಿಸಿದ್ದರು.)

ಶಾಸನ ರಚನಾ ಕಾರ್ಯಕಲಾಪಗಳು

(ಪರ್ಯಾಲೋಚನಾ ಪ್ರಸ್ತಾವ)

೧) ೧೯೪೪ರ ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆಗೂಡು ಮತ್ತು ರೇಷ್ಮೆ ನೂಲಲಿ (ಉತ್ಪಾದನೆ ಸರಬರಾಜು ಮತ್ತು ವ್ಯಾಪಾರದ ನಿಯಂತ್ರಣ) (ತಿದ್ದುಪಡಿ) ವಿಧೇಯಕ

ಡಾ॥ ಜಿ. ಪರಮೇಶ್ವರ್ (ರೇಷ್ಮೆ ರಾಜ್ಯ ಮಂತ್ರಿಗಳು).—ಮಾನ್ಯ ಉಪಾಧ್ಯಕ್ಷರೇ, ೧೯೪೪ನೇ ಸಾಲಿನ ಕರ್ನಾಟಕ ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ ಹುಳುತಳಿ ರೇಷ್ಮೆ ಸರಬರಾಜು, ಹಂಚಿಕೆ ಮತ್ತು ವ್ಯಾಪಾರದ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು

ಡಾ॥ ಜಿ. ಪರಮೇಶ್ವರ್.—ಈ ವಿಧೇಯಕವನ್ನು ಸಭೆಯು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪರ್ಯಾಲೋಚನಾ ಪ್ರಸ್ತಾವ

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೪೪ನೇ ಸಾಲಿನ ರೇಷ್ಮೆ ಹುಳುತಳಿ, ರೇಷ್ಮೆಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ವ್ಯಾಪಾರದ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ರಿಂದ ೭ ರವರೆಗೆ:—

ಉಪಾಧ್ಯಕ್ಷರು.—" ಖಂಡ ೨ ರಿಂದ ೭ ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ ೨ ರಿಂದ ೭ ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ " ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ॥ ಜಿ. ಪರಮೇಶ್ವರ್ (ರೇಷ್ಮೆ ರಾಜ್ಯ ಮಂತ್ರಿಗಳು) —೧೯೪೪ರ ಕರ್ನಾಟಕ ರೇಷ್ಮೆ ಹುಳು ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು ಹಂಚಿಕೆ ಮತ್ತು ವ್ಯಾಪಾರದ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, " ೧೯೪೪ರ ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನೆ, ಸರಬರಾಜು, ಹಂಚಿಕೆ ಮತ್ತು ವ್ಯಾಪಾರದ ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು,,.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೨) ೧೯೪೪ರ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎನ್.ಜಿ. ಹಾಲಪ್ಪ (ಪರಿಸರ, ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೪೪ರ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎನ್. ಜಿ. ಹಾಲಪ್ಪ. ಈ ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಪ್ರಸ್ತಾವ ಏನೆಂದರೆ, ೧೯೪೪ರ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ತಿದ್ದುಪಡಿ ಪ್ರಸ್ತಾವ

ಖಂಡ ೨ಕ್ಕೆ :

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಈ ವಿಧೇಯಕದ ಎರಡನೇ ಖಂಡದ ನಿಯಮ ೯೧ (೩೬)ನೇ ಅನುಸೂಚಿಯ ಮೂರನೇ ಅಂಕಣದ ಎರಡನೇ ಕ್ರಮ ಸಂಖ್ಯೆ ನಂತರಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ. "ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಎಂಬ ಪದದ ತರುವಾಯ "ಕಡೂರು" ಎಂಬುದನ್ನು, ಮತ್ತು ಆನೇ ಕ್ರಮಸಂಖ್ಯೆಯಲ್ಲಿ ಶಿವಮೊಗ್ಗೆಯ ಭದ್ರಾವತಿ ಎಂಬ ಪದದ ತರುವಾಯ 'ಹೊಳಲೂರು' ಎಂಬುದನ್ನು ಸೇರಿಸುವುದು".